

## ಓಣಂ ಸೀರೆಯ ವೈಶಿಷ್ಟ್ಯ

ಓಣಂ ದಿನ ಎಲ್ಲ ಮಹಿಳೆಯರಿಗೆ ಕಸವು ಸೀರೆಯಲ್ಲಿ ಕಂಗೊಳಿಸುವ ಖುಷಿ. ಹಬ್ಬವನ್ನು ರಾಜ್ಯದಾದ್ಯಂತ ಎಲ್ಲರೂ ಸಂಭ್ರಮದಿಂದ ಆಚರಿಸಿ ಭಾವೈಕ್ಯ ಮೆರೆಯುವುದು ಇಲ್ಲಿನ ವಿಶೇಷ. ಸೀರೆಯ ಮಟ್ಟಿಗೆ ಹೇಳುವುದಾದರೆ ರೇಷ್ಮೆ, ಖಾದಿ, ಕಾಟನ್ ಸೀರೆಗಳನ್ನು ಉಡುವುದು ರೂಢಿ. ಎಲ್ಲರೂ ಸಮವಸ್ತ್ರದಂತೆ ಧರಿಸಿ ಹಬ್ಬದ ಮಹತ್ವವನ್ನು ಸಾರುತ್ತಾರೆ.

ಸಾಂಪ್ರದಾಯಿಕವಾಗಿ, ಓಣಂ ಸಂದರ್ಭದಲ್ಲಿ ಬಿಳಿ ಬಣ್ಣದ ರೇಷ್ಮೆ ಸೀರೆಗಳನ್ನು ಧರಿಸಲಾಗುತ್ತದೆ, ಇವು ಚಿನ್ನದ ಅಂಚು ಹೊಂದಿರುತ್ತದೆ. ಓಣಂ ಸೀರೆಗಳು ಕೇರಳದ ಸಂಸ್ಕೃತಿ, ಸಂಪ್ರದಾಯ ಮತ್ತು ಸುಗ್ಗಿಯ ಹಬ್ಬದ ಆಚರಣೆಗೆ ಸಾಕ್ಷಿಯಾಗಿವೆ.

ಈಗೀಗ ಸಾಂಪ್ರದಾಯಿಕ ಸೀರೆಗಳ ಜೊತೆಗೆ, ಬೇರೆ ಬೇರೆ ಬಣ್ಣ ಮತ್ತು ವಿನ್ಯಾಸಗಳ ಸಮಕಾಲೀನ ಓಣಂ ಸೀರೆಗಳು ಜನಪ್ರಿಯವಾಗುತ್ತಿವೆ. ಒಟ್ಟಿನಲ್ಲಿ ಓಣಂ ಸೀರೆಗಳು ಹಬ್ಬದ ಸಂಭ್ರಮಕ್ಕೆ ಮತ್ತು ಕೇರಳದ ಸಾಂಸ್ಕೃತಿಕ ಪರಂಪರೆಗೆ ಭಾಷ್ಯ ಬರೆಯುವಂತಿವೆ.

ಕಲರ್ ಜೊತೆಗೆ ಬಣ್ಣ ಬಣ್ಣದ ಅಂಚಿನ ಕಾಂಬಿನೇಷನ್ ಆಯ್ಕೆಯಲ್ಲಿ ಟ್ರೆಂಡಿಂಗ್ ಸೃಷ್ಟಿಸಿದ್ದಾರೆ ವಸ್ತ್ರವಿನ್ಯಾಸಕರು. ಕ್ರೀಮ್ ಬಣ್ಣದ ಸೀರೆಗೆ ಮರೂನ್, ಬಾಟಲ್ ಗ್ರೀನ್, ಪಿಂಕ್ ಕಲರ್ ಅನ್ನು ಕಾಂಟ್ರಾಸ್ಟ್ ಆಗಿ ಬಳಸಿ ಹೆಚ್ಚು ಆಕರ್ಷಕವಾಗಿಸಿದ್ದಾರೆ ವಿನ್ಯಾಸಕರು. ಜೊತೆಗೆ ಕೆಂಪು, ಹಳದಿ, ನೀಲಿ ಕೂಡ ಅಂಚನ್ನು ಅಂದಗೊಳಿಸಿವೆ. ಈ ಗಾಢ ಕಾಂಟ್ರಾಸ್ಟ್ ಕಲರ್ ಸೀರೆಯನ್ನಲ್ಲದೆ ಪಂಚೆ, ಶಲ್ಯ, ಫ್ರಾಕ್, ಲಂಗ–ದಾವಣಿಯ ಅಂದವನ್ನೂ ಇಮ್ಮಡಿಗೊಳಿಸಿದೆ.

ಆನ್‌ಲೈನ್‌ನಲ್ಲಿ ‘ಜಸ್ಟ್ ಓಣಂ’ ಕಾಸ್ಟ್ಯೂಮ್ ಎಂದು ಟೈಪ್ ಮಾಡಿದರೆ ಸಾಕು. ಸಾಲು ಸಾಲು ವೈವಿಧ್ಯಮಯ ದಿರಿಸಿನ ಚಿತ್ರಗಳು ಕಣ್ಮುಂದೆ ಬಂದು ನಿಲ್ಲುತ್ತವೆ. ಪುಟ್ಟ ಮಕ್ಕಳಿಂದ ಎಲ್ಲ ವಯೋಮಿತಿಯವರಿಗೆ ಒಪ್ಪುವ ಸಿದ್ಧ ಉಡುಪುಗಳು ಕೈಬೆರಳ ತುದಿಯಲ್ಲೇ ಇರಲಿವೆ. ಪ್ರತೀ ಬಾರಿಯೂ ಬಂಗಾರದಂಚಿನ ಕ್ರೀಮ್ ಬಣ್ಣದ ಸೀರೆ ಉಟ್ಟು ಬೇಸರವೆನಿಸಿದ್ದರೆ ನಿಮಗೊಪ್ಪುವ ಕಾಂಟ್ರಾಸ್ಟ್ ಬಣ್ಣಗಳ ಸೀರೆ ಆಯ್ದುಕೊಳ್ಳಬಹುದು. ಲಂಗ–ಬ್ಲೌಸ್, ಲೆಹೆಂಗಾ, ಚೂಡಿದಾರ್ ಕೂಡ ಯುವತಿಯರಿಗಾಗಿ ಸಿದ್ಧವಿದೆ. ಪುರುಷರಿಗೆ ಪಂಚೆ– ಶರ್ಟ್ ಬದಲು ಶೆರ್ವಾನಿ–ಪಂಚೆ–ಶಲ್ಯದ ಕಾಂಬಿನೇಷನ್ ಕೂಡ ಬಂದಿದೆ. ಪಂಚೆ ಜತೆ ಗಾಢ ಬಣ್ಣದ ಶರ್ಟ್ ಕೂಡ ಟ್ರೆಂಡಿಂಗ್‌ನಲ್ಲಿದೆ. ಪುಟ್ಟ ಪುಟ್ಟ ಹೆಣ್ಮಕ್ಕಳಿಗೆ ಫ್ರಾಕ್, ಲಂಗ–ಬ್ಲೌಸ್ ವೈವಿಧ್ಯಮಯ ವಿನ್ಯಾಸ ತಳೆದಿವೆ. ಈ ಎಲ್ಲ ಉಡುಪುಗಳಿಗೆ ಅಪೂರ್ವ ಕಸೂತಿ ವರ್ಕ್ ಕೂಡ ವಿಭಿನ್ನ ಲುಕ್ ಕೊಡುತ್ತಿವೆ.

ಸಾಂಪ್ರದಾಯಿಕ ಸೀರೆಯ ಬಾಟಮ್ ಹಾಗೂ ಸೆರಗಿಗೆ ಥ್ರೆಡ್‌ ಕಸೂತಿ ವರ್ಕ್ ವಿಶಿಷ್ಟ ಮೆರುಗು ನೀಡುತ್ತಿದೆ. ಹಾಗೆಯೇ ಲೆಹೆಂಗಾ, ಲಂಗ–ದಾವಣಿಯಲ್ಲಿ ಲಂಗದ ಬಾಟಂ ಹೆಚ್ಚಿನ ಕಸೂತಿಯನ್ನೊಳಗೊಂಡು ಯುವತಿಯರನ್ನು ಸೆಳೆಯುತ್ತಿದೆ. ಚೂಡಿದಾರ್ ಜತೆಗೆ ಕಸೂತಿ ಕಲೆ ಹೊತ್ತ ದುಪಟ್ಟಾ ಚೂಡಿದಾರದ ಅಂದವನ್ನು ಹೆಚ್ಚಿಸಿದೆ. ಓಣಂನಲ್ಲಿ ಧರಿಸುವ ಈ ಸಾಂಪ್ರದಾಯಿಕ ಉಡುಪುಗಳೇ ಕೇರಳದಲ್ಲಿ ಮದುವೆಗಳಲ್ಲೂ ಆದ್ಯತೆ ಪಡೆಯುತ್ತಿವೆ. ರೇಷ್ಮೆಯಲ್ಲಿ ನೇಯ್ದ ಕಸವು ಸೀರೆ, ಇತ್ತೀಚಿನ ಟ್ರೆಂಡ್‌ನಲ್ಲಿ ಕುಸುರಿಯಿಂದ ನೇಯ್ದ ಬ್ಲೌಸ್ ವಧುವಿನ ಅಂದವನ್ನು ಮುಮ್ಮಡಿಗೊಳಿಸುತ್ತಿವೆ.

ಕೇರಳದ ಓಣಂ ಹಬ್ಬದ ಸಂಭ್ರಮ ನಮ್ಮ ರಾಜ್ಯವನ್ನೂ ಬಿಟ್ಟಿಲ್ಲ. ಅದರಲ್ಲೂ ಬೆಂಗಳೂರಿನಲ್ಲಿ ಓಣಂ ಆಚರಣೆ ಮುನ್ನೆಲೆಗೆ ಬರುತ್ತಿದೆ. ಬಹುರಾಷ್ಟ್ರೀಯ ಕಂಪನಿಯ ಕಚೇರಿಗಳಲ್ಲೂ ವಿಶೇಷವಾಗಿ ಆಚರಿಸಿ ಸಂಭ್ರಮಿಸಲಾಗುತ್ತಿದೆ. ಆ ಸಂದರ್ಭದಲ್ಲಿ ಪುರುಷರಾದಿಯಾಗಿ ಮಹಿಳೆಯರೆಲ್ಲರೂ ಓಣಂ ಸಾಂಪ್ರದಾಯಿಕ ದಿರಿಸನ್ನೇ ಧರಿಸಿ ಹಬ್ಬಕ್ಕೆ ಕಳೆಕಟ್ಟುತ್ತಿದ್ದಾರೆ.

ಆಧುನಿಕತೆಯಲ್ಲಿ ಬದಲಾವಣೆ ಬಯಸುವ ಯುವಜನರ ಅಭಿರುಚಿಗೂ ಒಗ್ಗಿಕೊಳ್ಳುತ್ತಿರುವ ಓಣಂ ಸಾಂಪ್ರದಾಯಿಕ ದಿರಿಸು ಎಷ್ಟೇ ಬದಲಾವಣೆ ಕಂಡರೂ ಮೂಲಸ್ವರೂಪವನ್ನೇ ಇಷ್ಟಪಟ್ಟು, ಅದುವೇ ಶ್ರೇಷ್ಠ, ಸುಂದರ ಎನ್ನುವವರೇ ಹೆಚ್ಚು. ಇದು ಕೇರಳಿಗರ ಹಬ್ಬವಾದರೂ ಕರ್ನಾಟಕದಲ್ಲೂ ಓಣಂ ಆಚರಣೆ ಮಾಡುವವರು ಹಲವರಿದ್ದಾರೆ. ಹಬ್ಬ ಎಂದರೆ ಎಲ್ಲರ ಸಂಭ್ರಮ ಅಲ್ಲವೇ ಮತ್ತೆ? ಅಂದ ಹಾಗೆ ಆಗಸ್ಟ್ 26ರಿಂದ ಸೆಪ್ಟೆಂಬರ್ 5ರವರೆಗೆ ಓಣಂ ಹಬ್ಬ. ಸಡಗರ, ಆಚರಣೆ, ಅಡುಗೆ, ಉಡುಗೆ ಎಲ್ಲದಕ್ಕೂ ಸಾಥಿ ಕೊಡುತ್ತಿದೆ ಫ್ಯಾಷನ್ ಲೋಕ! ■

## ಪೌರಾಣಿಕ ಹಿನ್ನೆಲೆ

ಓಣಂ ಕೇರಳಿಗರು ಆಚರಿಸುವ ಪ್ರಸಿದ್ಧ ಹಬ್ಬ. ವಿಷ್ಣುವು ಮಹಾಬಲಿಯನ್ನು ಭೂಗತ ಲೋಕಕ್ಕೆ ಗಡಿಪಾರು ಮಾಡಿದ ನಂತರ ಹಿಂದಿರುಗಿದ ದಿನದ ಸ್ಮರಣಾರ್ಥವಾಗಿ ಈ ಓಣಂ ಹಬ್ಬವನ್ನು ಆಚರಿಸಲಾಗುತ್ತದೆ ಎಂಬುದು ಪ್ರತೀತಿ. ಆದರೆ ಈಗೆಲ್ಲ ಓಣಂ ಎಂದರೆ ಪುರಾಣ ಕಥೆ ತಿಳಿಯುವ ಗೋಜಿಗೆ ಹೋಗುವುದೇ ಇಲ್ಲ. ಈಗೇನಿದ್ದರೂ ಹಬ್ಬ ಬಂತೆಂದರೆ ಗಮನಹರಿಸುವುದು ಹಬ್ಬಕ್ಕೆ ಧರಿಸುವ ದಿರಿಸಿನ ಬಗ್ಗೆಯೇ. ಈ ಹಬ್ಬದಲ್ಲಿ ಮಹಿಳೆಯರು ಸಾಂಪ್ರದಾಯಿಕವಾಗಿ ಕಸವು ಸೀರೆಯನ್ನು ಧರಿಸಿದರೆ, ಪುರುಷರು ಮುಂಡುವನ್ನು ಧರಿಸುತ್ತಾರೆ. ಈ ಉಡುಪುಗಳು ಕೇರಳದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.

